# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ. 616/2023

| | | | | |
|---|---|---|---|---|
| 01 | ಹೆಸರು | ಡಾ.ಮಾಲತೇಶ್ | ಸಿ ಡಬ್ಲೂ | 06 |
| 02 | ತಂದೆಯ ಹೆಸರು | ಶಿವಪ್ಪ | ಪಿಡಬ್ಲೂ | 03 |
| 03 | ವಯಸ್ಸು | 43 | ಪ್ರಮಾಣೀಕರಿಸಲಾದ ದಿನಾಂಕಃ 17.06.2026 | |
| 04 | ಉದ್ಯೋಗ | ವೈದ್ಯಾಧೀಕಾರಿಗಳು | | |
| 05 | ಊರು | ಬನ್ನೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಏಪ್ರೀಲ್ 2021 ರಿಂದ ಇಲ್ಲಿಯವರೆಗೂ ಬನ್ನೂರಿನ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧೀಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ದಿಃ **07.02.2023** ರಂದು ಕರ್ತವ್ಯದಲ್ಲಿ ಇದ್ದಾಗ ರಾತ್ರಿ **8.40** ಗಂಟೆಗೆ ಚಾಸಾ **1** ರವರು ತಾವೇ ಸ್ವತಃ ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ಬಂದಿರುತ್ತಾರೆ. ನಾನು ಅವರನ್ನು ವಿಚಾರಿಸಿದಾಗ ಅವರಿಗೆ ಯಾರೋ ಪ್ರೀತಮ್ ಮತ್ತು ಕುಮಾರ್ ಎನ್ನುವವರು ರಾತ್ರಿ **7.45** ಗಂಟೆಗೆ ಕುಳ್ಳನಕೊಪ್ಪಲು ಗ್ರಾಮದಲ್ಲಿ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ಅವರನ್ನು ತಪಾಸಣೆ ಮಾಡಿದಾಗ ಅವರ ಎಡ ಕಣ್ಣು ಕೆಂಪಾಗಿತ್ತು ಮತ್ತು ಅವರ ಹಣೆಯ ಎಡಭಾಗದಲ್ಲಿ ನೋವು ಮತ್ತು ಅವರ ದೇಹದ ಎಲ್ಲಾ ಭಾಗಗಳಲ್ಲಿ ನೋವು ಇರುವುದು ಕಂಡು ಬರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತವೆ. ನಾನು ಚಾಸಾ-**8** ರವರ ಮನವಿಯಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **3** ಎಂದು, ಸಾಕ್ಷಿಯ ಸಹಿಯನ್ನು **ನಿ ಪಿ 3(ಎ)** ಎಂದು ಗುರುತಿಸಲಾಯಿತು. ಕೈಯಿಂದ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದಾಗ ಈ ರೀತಿಯ ನೋವುಗಳಾಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಆರ್.ಎನ್ ವಕೀಲರರಿಂದಃ**

ಒಬ್ಬ ವ್ಯಕ್ತಿ ಸ್ವತಃ ಆಯ ತಪ್ಪಿ ಹಳ್ಳಕ್ಕೆ ಬಿದ್ದಾಗ ಈ ರೀತಿಯ ನೋವು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ನಿಪಿ 3 ರಲ್ಲಿ ಇರುವ ನೋವುಗಳನ್ನು ಚಾಸಾ 1 ರವರ ಹೇಳಿಕೆಯನ್ನಾಧರಿಸಿ ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ನೋವುಗಳನು ಬಾಹ್ಯವಾಗಿ ಕಾಣುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ. Sd/-

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ತಿ.ನರಸೀಪುರ.